**ದಿನಾಂಕ 01-04-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಎಮ್.ಎಮ್.ಟಿ ವಕೀಲರಿಂದ ಪ್ರತಿವಾದಿ-1 ಪರವಾಗಿ**

1.ಸರ್ವೆ ನಂ.144/2 ಕ್ಷೇತ್ರ 14 ಏಕರೆ 10 ಗುಂಟೆ ಆಸ್ತಿಯನ್ನು 1 ನೇ ಪ್ರತಿವಾದಿಯವರು ಚಿನ್ನವ್ವ ಪಾಟೀಲ ಅವರ ಕಡೆಯಿಂದ ಖರೀದಿಸಿದ್ದಾರೆ ಎಂದರೆ ಸರಿ. ಚಿನ್ನವ್ವ ಅವರ ಗಂಡ ಹಣಮಂತ ಎಂದರೆ ಸರಿ. ಸದರಿ ಆಸ್ತಿ ಖರೀದಿಸಿದ ಪ್ರತಿವಾದಿ-1 ರವರು ಸದರಿ ಆಸ್ತಿಯ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ. ಅದೇ ರೀತಿ ನೀವು ಈಗ ಪಕ್ಷಗಾರರನ್ನಾಗಿ ಮಾಡಿದ ಖರೀದಿದಾರರನ್ನು ಸಹ ತಾವು ಖರೀದಿಸಿದ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ನೀವು ಉದ್ದೇಶಪೂರ್ವಕವಾಗಿ ಚಿನ್ನವ್ವ, ಮಲ್ಲಪ್ಪ, ಚಿನ್ನವ್ವನ ಗಂಡ ಹಣಮಂತ ಇವರು ತೀರಿಕೊಂಡ ನಂತರ ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣವನ್ನು ವಿಳಂಬಗೊಳಿಸುವ ಉದ್ದೇಶದಿಂದ ನೀವು ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಅವರು ಖರೀದಿಸಿದ್ದರಿಂದ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ಹೇಳುತ್ತಾರೆ.

ಪ್ರತಿವಾದಿ-3 ಪರ ವಕೀಲರು ಗೈರು ಹಾಜರ ಇದ್ದು, ಪ್ರತಿವಾದಿ-4 ರವರು ಪ್ರತಿವಾದ ಪತ್ರ ಸಲ್ಲಿಸದ ಕಾರಣ ಮತ್ತು ಪ್ರತಿವಾದಿ-4 ಪರ ವಕೀಲರು ಗೈರು ಹಾಜರ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ